# ಬಾಲ್ಯ ವಿವಾಹ

ಕೆಲವು ಸಮಾಜಗಳಲ್ಲಿ ರೂಢಿಯಲ್ಲಿರುವ **ಬಾಲ್ಯ ವಿವಾಹ** ಸಾಧಾರಣವಾಗಿ ಎರಡು ಪ್ರತ್ಯೇಕ ಸಾಮಾಜಿಕ ತತ್ವಗಳನ್ನು ಉಲ್ಲೇಖಿಸುತ್ತದೆ. ಮೊದಲ ಮತ್ತು ವ್ಯಾಪಕವಾಗಿ ಹರಡಿರುವ ರೂಢಿ ಅಂದರೆ ಅದು ಒಬ್ಬ ವಯಸ್ಕ ಪುರುಷ ಚಿಕ್ಕ ಹುಡುಗಿಯನ್ನು (ಸಾಮಾನ್ಯವಾಗಿ ಹದಿನೈದು ವರ್ಷಗಳಿಗಿಂತ ಕಡಿಮೆ ವಯಸ್ಸಿನ ಹುಡುಗಿ ಎನ್ನಲಾಗಿದೆ) ಮದುವೆಯಾಗುವುದು. ರೂಢಿಯಲ್ಲಿ, ಯಾವಾಗಲೂ ಚಿಕ್ಕ ಹುಡುಗಿ ಒಂದು ಗಂಡಸನ್ನು ಮದುವೆಯಾಗುವುದಾಗಿದೆ.

ಎರಡನೆಯ ರೂಢಿಯೆಂದರೆ ವ್ಯವಸ್ಥಿತ ಮದುವೆ, ಇದರಲ್ಲಿ ಎರಡೂ ಮಕ್ಕಳ ತಂದೆ-ತಾಯಿಗಳು ಮುಂದೆಂದೋ ಭವಿಷ್ಯದಲ್ಲಿ ನಡೆವ ಮದುವೆಯನ್ನು ಯೋಜಿಸುವುದು. ಈ ರೂಢಿಯಲ್ಲಿ, ಮದುವೆಗೆ ನಿಶ್ಚಿತಾರ್ಥವಾದ ಹುಡುಗ ಹುಡುಗಿಯನ್ನು ಮದುವೆ ಸಮಾರಂಭದವರೆಗೂ ಒಬ್ಬರಿಗೊಬ್ಬರು ಭೇಟಿ ಆಗುವ ಹಾಗಿಲ್ಲ, ಮದುವೆ ವಯಸ್ಸಿಗೆ ಅವರಿಬ್ಬರೂ ಮುಟ್ಟಿದ ಮೇಲೆ ಆಗ ಮದುವೆ ಸಮಾರಂಭ ನಡೆಯುತ್ತದೆ.

ಮಹಿಳಾ ಹಕ್ಕುಗಳು ಅಥವಾ ಮಕ್ಕಳ ಹಕ್ಕುಗಳ ಹೋರಾಟದಂತೆ ಮಾನವ ಹಕ್ಕುಗಳ ಹೋರಾಟವು ಹೆಚ್ಚಿದಂತೆಲ್ಲಾ ಬಾಲ್ಯ ವಿವಾಹಗಳ ಸಂಪ್ರದಾಯವು ಸಾಕಷ್ಟು ಕಡಿಮೆ ಆಗಿದೆ ಕಾರಣ ಬಾಲ್ಯ ವಿವಾಹವು ಸರಿಯಾದುದಲ್ಲವೆಂದು ಮತ್ತು ಅಪಾಯಕಾರಿ ಎಂದು ಪರಿಗಣಿಸಲಾಗಿದೆ.

ಬಾಲ್ಯ ವಿವಾಹಗಳಿಗೆ ಅನೇಕ ಉದ್ದೇಶಗಳಿರಬಹುದು. ಕೆಲವು ಸಂಸ್ಕೃತಿಗಳಲ್ಲಿನ ಶ್ರೀಮಂತ ಪ್ರಭುತ್ವ-ಗುಣ ವರ್ಗದ ಜನ, ಅನ್ಯ ವರ್ಗಕ್ಕೆ ಸೇರಿದ ಬಾಲಕ ಬಾಲಕರಲ್ಲಿ ಬಾಲ್ಯ ವಿವಾಹಗಳನ್ನು ತಮ್ಮ ತಮ್ಮ ರಾಜಕೀಯ ಭವಿಷ್ಯಗಳಿಗಾಗಿ ಎರಡು ವರ್ಗದ ಸಂಬಂಧವನ್ನು ಭದ್ರ ಮಾಡಿಕೊಳ್ಳಲು ಏಪರ್ಡಿಸಿರುವುದೂ ಇದೆ. ಉದಾಹರಣೆಗೆ, ಅಷ್ಟೇನೂ ಬಲಾಢ್ಯವಲ್ಲದ ವರ್ಗದ ಉನ್ನತ ಕುಟುಂಬದ ಮಗ ಅಥವಾ ಮಗಳನ್ನು ಬಲಾಢ್ಯ ವರ್ಗದ ಕುಟುಂಬದವರಲ್ಲಿ ಮದುವೆ ಏರ್ಪಡಿಸಿ ತಮ್ಮ ಕುಲ ಅಂತರ್ಗತವಾಗುವುದನ್ನು ತಪ್ಪಿಸಲು ಬಾಲ್ಯ ವಿವಾಹಗಳನ್ನು ಏರ್ಪಡಿಸಿರುವುದಿದೆ. ಕೆಳ ವರ್ಗದವರೇನಾದರು ಅದೃಷ್ಟವಂತರಾಗಿದ್ದಲ್ಲಿ, ವಾರಸುದಾರಿಕೆಯನ್ನು ದೃಢಪಡಿಸಿಕೊಂಡು ಅವರ ಮಕ್ಕಳನ್ನು ಶ್ರೀಮಂತ ವರ್ಗದವರಿಗೆ ಕೊಟ್ಟು ಮದುವೆ ಮಾಡಿಸುತ್ತಿದ್ದರು. ಈ ಮುಖಾಂತರ ತಮ್ಮ ಆರ್ಥಿಕ ಅಭಿವೃದ್ಧಿಯನ್ನು ಕಂಡುಕೊಳ್ಳುತ್ತಿದ್ದರು.

ಮಗುವಿನ ನಿಶ್ಚಿತಾರ್ಥದ ವಿಚಾರದಲ್ಲಿ ಮಗುವಿನ ತಂದೆ-ತಾಯಿಗಳು ಇನ್ನೊಂದು ಮಗುವಿನ

ತಂದೆ ತಾಯಿಗಳ ಸಾಮಾಜಿಕ ಸ್ಥಾನಮಾನ, ಆರ್ಥಿಕ ಸ್ಥಿತಿಗತಿ ಮತ್ತು ವಿದ್ಯಾಭ್ಯಾಸದ ಮಟ್ಟ ಎಲ್ಲವನ್ನೂ ಗಣನೆಗೆ ತೆಗೆದುಕೊಂಡು ತಮ್ಮ ಮಗುವಿನ ಭವಿಷ್ಯವನ್ನು ಚಿಕ್ಕ ವಯಸ್ಸಿನಲ್ಲೇ ಏಕಪಕ್ಷೀಯವಾಗಿ ನಿರ್ಧರಿಸಿ ಬಿಡುತ್ತಿದ್ದರು. ಬಾಲ್ಯ ವಿವಾಹಗಳನ್ನು ಆಯೋಜಿಸುವವರು ಭೌತಿಕ ಆಕರ್ಷಣೆಯು ಮದುವೆ ಮತ್ತು ಕುಟುಂಬದ ವಿಚಾರದಲ್ಲಿ ಅಷ್ಟೇನು ಮುಖ್ಯವಲ್ಲ ಎಂದು ಆಲೋಚಿಸುತ್ತಾರೆ.[*citation needed*] ನಿಶ್ಚಿತಾರ್ಥಕ್ಕೂ ಮದುವೆಗೂ ಎಷ್ಟು ಸಮಯದ ಅಂತರವಿರಬೇಕೆಂಬುದು ವಿಶೇಷವಾಗಿ ಗಣನೆಗೆ ತೆಗೆದುಕೊಳ್ಳುವ ವಿಚಾರ.

ಅಂತರ ವರ್ಗದ ವಿವಾಹದಿಂದ ಕುಟುಂಬಗಳು ರಾಜಕೀಯ ಮತ್ತು/ಅಥವಾ ಆರ್ಥಿಕ ಸಬಲತೆಯನ್ನು ಗಟ್ಟಿ ಮಾಡಿಕೊಳ್ಳುತ್ತಾರೆ. ನಿಶ್ಚಿತಾರ್ಥವನ್ನು ಕುಂಟುಂಬ ಮತ್ತು ಮಕ್ಕಳ ಮೇಲಿನ ಒಪ್ಪಂದ ಎಂದು ಪರಿಗಣಿಸಲಾಗುತ್ತದೆ. ಈ ನಿಶ್ಚಿತಾರ್ಥವು ಏನಾದರು ಮುರಿದು ಬಿದ್ದ ಪಕ್ಷದಲ್ಲಿ ಕುಟುಂಬಗಳ ಮೇಲೆ ಮತ್ತು ಮಧು ಮಕ್ಕಳ ಮೇಲೆ ಗಂಭೀರ ಪರಿಣಾಮವನ್ನು ಬೀರುತ್ತದೆ.

ಬಾಲ್ಯವಿವಾಹದ ಪದ್ದತಿಯನ್ನು ನಿಯಂತ್ರಿಸಲು ರಾಜಸ್ಥಾನ್, ಗುಜರಾತ್, ಮಹಾರಾಷ್ಟ್ರ, ಆಂಧ್ರ ಪ್ರದೇಶ, ಬಿಹಾರ್ ಮತ್ತು ಹಿಮಾಚಲ ಪ್ರದೇಶ ರಾಜ್ಯಗಳು ಮದುವೆಯ ಗಂಡು ಹೆಣ್ಣಿನ ವಯಸ್ಸುಗಳನ್ನು ದೃಢ ಪಡಿಸಲು ಮತ್ತು ನ್ಯಾಯಬದ್ಧಗೊಳಿಸಲು ವಿವಾಹವನ್ನು ನೊಂದಣಿ ಮಾಡಿಸುವುದನ್ನು ಕಡ್ಡಾಯ ಮಾಡಿರುತ್ತಾರೆ.[*citation needed*] ಆದಾಗ್ಯೂ, ಸಾಮೂಹಿಕ ಮದುವೆಗಳಲ್ಲಿ ಬಾಲ್ಯವಿವಾಹಗಳು ನುಸುಳಿದ್ದರೆ ಅದನ್ನು ಅಧಿಕಾರಿಗಳು ನಿರ್ಲಕ್ಷಿಸಿರುತ್ತಾರೆ.[೧೪]

“ನ್ಯಾಷನಲ್ ಪ್ಲಾನ್ ಆಫ್ ಆಕ್ಷನ್ ಫಾರ್ ಚಿಲ್ಡ್ರನ್ 2005,” (ಭಾರತ ಸರಕಾರದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಪ್ರಕಟಿಸಿರುವಂತೆ) 2010 ರಷ್ಟು ಹೊತ್ತಿಗೆ ಬಾಲ್ಯವಿವಾಹಗಳನ್ನು ಏರ್ಪಡಿಸುವುದನ್ನು ಸಂಪೂರ್ಣವಾಗಿ ತೊಡೆದು ಹಾಕಲು ಗುರಿಯನ್ನು ಹೊಂದಲಾಗಿದೆ. ಭಾರತದ ಭಾರಿ ಜನಸಂಖ್ಯೆಯಿಂದಾಗಿ ಪ್ರತಿಯೊಂದು ಮಗುವನ್ನು ಗಮನಿಸುವುದು ಅಸಾಧ್ಯವಾದರೂ ಈ ಯೋಜನೆ ಬಹುತೇಖವಾಗಿ ಯಶಸ್ಸನ್ನು ಕಂಡಿದೆ.[೧೫]

UNICEF’ನ “ಸ್ಟೇಟ್ ಆಫ್ ದಿ ವರ್ಲ್ಡ್ಸ್ ಚಿಲ್ಡ್ರನ್-2009” ವರದಿಯ ಪ್ರಕಾರ, 47%ರಷ್ಟು ಭಾರತೀಯ ಮಹಿಳೆಯರು 20–24 ವಯಸ್ಸಿನ ಹೆಣ್ಣುಗಳು ಕಾನೂನಿನ ವಿರೋಧವಾಗಿ 18 ವಯಸ್ಸಿನೊಳಗೇ ಮದುವೆ ಆಗಿದ್ದಾರೆ, 56% ರಷ್ಟು ಮಹಿಳೆಯರು ಗ್ರಾಮೀಣ ಪ್ರದೇಶದವರು.[೧೬] ವಿಶ್ವದಲ್ಲಿ ನಡೆವ ಬಾಲ್ಯವಿವಾಹಗಳಲ್ಲಿ 40% ಭಾರತದಲ್ಲೇ ನಡೆಯುವಂತಹುದು ಎಂದು

ವರದಿ ಮಾಡಿದೆ.[೧೭]

ಐತಿಹಾಸಿಕ ಸಾಹಿತ್ಯಗಳಲ್ಲಿ ದಾಖಲಾಗಿರುವ ಗತಕಾಲದ ಪದ್ಧತಿ[ಬದಲಾಯಿಸಿ]

•ಪರಾಗುವಾದ ರೀಯೋ ಸಾವೋ ಲಾರಂಜೋದಲ್ಲಿ ನೆಲೆಸಿರುವ ಅಮೇರಿಕಾ–ಭಾರತೀಯ ಗ್ವಾಟ್ಟೋಗಳಲ್ಲಿ ತಮಗಿಂತ ಐದರಿಂದ ಎಂಟು ವರ್ಷಗಳು ಹೆಚ್ಚಿನವರನ್ನು ಮದುವೆ ಆಗುತ್ತಿದ್ದರು.
•ಪರ್ಷಿಯಾದ ಚಿರಾಸ್‌ನಲ್ಲಿ ಹೆಣ್ಣು ಮಕ್ಕಳಿಗೆ ಪ್ರೌಢಾವಸ್ಥೆಗೂ ಮುನ್ನವೇ ಮದುವೆ ಆಗಿಬಿಡುತ್ತದೆ.
•ಸಿರಿಯಾದಲ್ಲಿ ... ಹೆಣ್ಣು ಮಕ್ಕಳು ಹತ್ತು ವರ್ಷ ವಯಸ್ಸಾಗುವುದಕ್ಕೆ ಮೊದಲೇ ಮದುವೆ ಆಗುತ್ತಾರೆ.
•ಪಶ್ಚಿಮ ಆಫ್ರೀಕಾದ ಆರ್ಕಿರಾ ಬಳಿಯ ಗಬೋನ್‌ನಲ್ಲಿ ಪ್ರೌಢಾವಸ್ಥೆ ಕಾಣಿಸುವವರೆಗೂ ಮದುವೆಯನ್ನು ವಿಳಂಬ ಮಾಡುವುದಿಲ್ಲ.
•ಸೂದನ್‌ನ ನೂಬಿಯಾದ ಪುರುಷರು ತರುಣಿಯರನ್ನು ಅವರು ಮುಟ್ಟಾಗುವ ಮೊದಲೇ ಅವರೊಡನೆ ಲೈಂಗಿಕ ಸುಖ ಅನುಭವಿಸುತ್ತಾರೆ.
•ಸುಮಾತ್ರದ ಅಟ್ಜೇಹ್‌ನವರು, ಪ್ರೌಢಾವಸ್ಥೆ ತಲುಪದ ಹೆಣ್ಣು ಮಕ್ಕಳನ್ನು ಮದುವೆಯಾಗುತ್ತಾರೆ ಜೊತೆಗೂ ಮಲಗುತ್ತಾರೆ.
•ಫಿಜಿಯಲ್ಲಿರುವ ವಿಟಿಯ ದ್ವೀಪದವರೂ ಕೂಡ ಹೆಣ್ಣುಗಳು ಮೈನೆರೆಯುವ ಮೊದಲೇ ಅವರನ್ನು ಮದುವೆ ಆಗಿ ಬಿಡುತ್ತಾರೆ.[೨೦]

## ಬಾಲ್ಯ ವಿವಾಹ

ಭಾರತೀಯ ಸಮಾಜದಲ್ಲಿ ಬಾಲ್ಯವಿವಾಹ ಪದ್ಧತಿಯು ಒಂದು ಸಾಮಾಜಿಕ ಸಂಗತಿಯಾಗಿದೆ. ಈ ಪದ್ಧತಿಯಲ್ಲಿ ಚಿಕ್ಕವಯಸ್ಸಿನ ಹುಡುಗಿಯರಿಗೆ (ಸಾಮಾನ್ಯವಾಗಿ ೧೫ ವಯಸ್ಸಿಗಿಂತ ಕೆಳಗಿನ ಹೆಣ್ಣು ಮಕ್ಕಳು) ವಯಸ್ಸಾದ ಪುರುಷರೊಂದಿಗೆ ಮದುವೆ ಮಾಡುತ್ತಾರೆ. ಎರಡನೇ ವಿಧದ ಪದ್ಧತಿಯೇನೆಂದರೆ; ತಂದೆತಾಯಿಗಳು ಬಾಲ್ಯದಲ್ಲಿಯೇ ಗಂಡು ಮತ್ತು ಹೆಣ್ಣು ಶಿಶುವನ್ನು ಭವಿಷ್ಯದಲ್ಲಿ ಬಾಲ್ಯವಿವಾಹ ಮಾಡಿಸುವಂತೆ ಆಣೆಮಾಡಿರುತ್ತಾರೆ. ಈ ಪದ್ಧತಿಯಲ್ಲಿ ಗಂಡು ಮತ್ತು ಹೆಣ್ಣುಮಕ್ಕಳು ತಮಗೆ ಮದುವೆಯಾಗುವ ಪ್ರಾಪ್ತ ವಯಸ್ಸಾಗುವ ತನಕ ಹಾಗು ವಿವಾಹವನ್ನು ನೆರವೇರಿಸುವ ತನಕ ಒಬ್ಬರನ್ನೊಬ್ಬರು ಸಂಧಿಸುವಂತಿಲ್ಲ. ಕಾನೂನಿನ ಪ್ರಕಾರ

ಪುರುಷರಿಗೆ ಮದುವೆಯಾಗುವ ಪ್ರಾಪ್ತ ವಯಸ್ಸು ೨೧ ಹಾಗು ಹೆಣ್ಣುಮಕ್ಕಳಿಗೆ ೧೮ ವರ್ಷಗಳು. ಯಾರೇ ತಂದೆ ತಾಯಿಗಳು ತಮ್ಮ ಮಕ್ಕಳ ಮದುವೆಯನ್ನು ಅಪ್ರಾಪ್ತ ವಯಸ್ಸಿನಲ್ಲಿ ನೆರವೇರಿಸಿದ್ದೇ ಆದರೆ ಅದನ್ನು ವರ್ಜ್ಯ/ರದ್ದುಗೊಳಿಸಬಹುದಾಗಿದೆ.

## ಬಾಲ್ಯ ವಿವಾಹದ ದುಷ್ಪರಿಣಾಮಗಳು

- ಅಪ್ರಾಪ್ತ ವಯಸ್ಸಿನಲ್ಲಿ ಅಥವಾ ಎಳೆ ವಯಸ್ಸಿನಲ್ಲಿ ಹುಡುಗಿಯರಿಗೆ ಮದುವೆಯಾಗಿ ಅವರು ಶೀಘ್ರ ಸಮಯದಲ್ಲಿಯೇ ಲೈಂಗಿಕ ಕ್ರಿಯೆಯಲ್ಲಿ ತೊಡಗುವುದರಿಂದ ಬಹುಬೇಗನೆ ಮಕ್ಕಳಾಗಿ ಅವರು ಹಲವಾರು ಆರೋಗ್ಯ ಸಮಸ್ಯೆಗಳಿಗೆ ಉದಾ:- ಹೆಚ್.ಐ.ವಿ. (ಊ I ಗಿ) ಮತ್ತು (obstetric fistula) ರೋಗಗಳಿಗೆ ತುತ್ತಾಗುವ ಸಂಭವವಿದೆ.
- ಸ್ಥಾನಮಾನದ ಅರಿವಿರದ, ಸಬಲರಾಗಿಲ್ಲದ ಮತ್ತು ಇನ್ನೂ ಪ್ರೌಢಾವಸ್ಥೆಯನ್ನು ಹೊಂದದ ಚಿಕ್ಕ ಹುಡುಗಿಯರು ಮನೆಯಲ್ಲಿ ದೌರ್ಜನ್ಯ, ಲೈಂಗಿದ ಶೋಷಣೆ ಮತ್ತು ಸಾಮಾಜಿಕ ಪ್ರತ್ಯೇಕತೆಗೆಗುರಿಯಾಗುವರು.
- ಬಾಲ್ಯದಲ್ಲಿ ಮದುವೆಯಾಗುವ ಕಾರಣದಿಂದ ಶಿಕ್ಷಣ ದ ಕೊರತೆಯುಂಟಾಗಿ, ಸಮರ್ಪಕ ಉದ್ಯೋಗ ಸಿಗದೆ ದೀರ್ಘಕಾಲದ ಬಡತನಕ್ಕೆ ತುತ್ತಾಗುತ್ತಾರೆ.
- ಬಾಲ್ಯವಿವಾಹದಿಂದ ಹೆಣ್ಣುಮಕ್ಕಳು, ನಿಷ್ಕಾರಣವಾದ ಅಸಮಾನತೆ, ಖಾಯಿಲೆ ಮತ್ತು ಬಡತನದಂತಹ ಸಮಸ್ಯೆಗಳಿಗೆ ಸತತವಾಗಿ ಗುರಿಯಾಗುತ್ತಾರೆ.
- ಎಳೆವಯಸ್ಸಿನಲ್ಲಿಯೇ ಮದುವೆಯಾಗಿರುವುದರಿಂದ ಹೆಣ್ಣುಮಕ್ಕಳಿಗೆ ಇನ್ನೂ ದೈಹಿಕವಾಗಿ ಬಲ ಹೊಂದಿಲ್ಲದೆ ಇರುವುದರಿಂದ ತಾಯಿ ಮತ್ತು ಶಿಶು ಮರಣ ಪ್ರಮಾಣ ಹೆಚ್ಚಾಗುತ್ತದೆ.

## ಬಾಲ್ಯ / ಚಿಕ್ಕ ವಯಸ್ಸಿನ ವಿವಾಹದ ಕಾರಣಗಳು ಮತ್ತು ಇದರ ವಿರುದ್ಧ ತೆಗೆದುಕೊಳ್ಳ ಬೇಕಾದ ಕ್ರಮಗಳು ಕಾರಣಗಳು.

- ಬಡತನ
- ಹೆಣ್ಣುಮಕ್ಕಳ ಕಡಿಮೆ ಶಿಕ್ಷಣ ಮಟ್ಟ

- ಹೆಣ್ಣು ಮಕ್ಕಳನ್ನು ಆರ್ಥಿಕವಾಗಿ ಹೊರೆ ಎಂದು ಭಾವಿಸುವುದರಿಂದ ಹೆಣ್ಣುಮಕ್ಕಳಿಗೆ ಕಡಿಮೆ ಸ್ಥಾನಮಾನ.
- ಸಾಮಾಜಿಕ ಪದ್ಧತಿ ಮತ್ತು ಸಂಪ್ರದಾಯಗಳು.

## ಸರ್ಕಾರ ಮತ್ತು ಸರ್ಕಾರೇತರ ಸಂಘಟನೆಗಳು ಕೈಗೊಂಡಿರುವ ಕ್ರಮಗಳು.

- ಬಾಲ್ಯವಿವಾಹದ ವಿರುದ್ಧ ಕಾನೂನನ್ನು ರಚಿಸುವುದು.
- ಹೆಣ್ಣುಮಕ್ಕಳಿಗೆ ಹೆಚ್ಚು ಶಿಕ್ಷಣ ದೊರಕುವಂತೆ ಮಾಡುವುದು.
- ಹಾನಿಕಾರವಾದ ಸಾಂಸ್ಕೃತಿಕ ಪದ್ಧತಿಗಳನ್ನು ಬದಲಾಯಿಸುವುದು.
- ಸಮುದಾಯ ಕಾರ್ಯಕ್ರಮಗಳನ್ನು ಬೆಂಬಲಿಸುವುದು
- ವಿದೇಶಿ ನೆರವನ್ನು ಗರಿಷ್ಠಗೊಳಿಸುವುದು.
- ಬಾಲಿಕಾ ವಧುಗಳ ಅಗತ್ಯತೆಯನ್ನು ಪೂರೈಸುವುದು.
- ಕಾರ್ಯಕ್ರಮಗಳ ಮೌಲ್ಯಮಾಪನ ಮಾಡಿ ಅವುಗಳ ಸಫಲತೆಯನ್ನು ತೀಳಿಯುವುದು.

## ಸರ್ಕಾರದ ಕ್ರಮಗಳು

- ಬಾಲ್ಯ ವಿವಾಹ ತಡೆ ಕಾಯ್ದೆ
- ಬಾಲ್ಯ ವಿವಾಹವನ್ನು ನಿಗ್ರಹಿಸಲು ಹಾಗೂ ಮದುವೆಯನ್ನು ಊರ್ಜಿತಗೊಳಿಸಲು ರಾಜಸ್ಥಾನ, ಗುಜರಾತ್, ಮಹಾರಾಷ್ಟ್ರ, ಕರ್ನಾಟಕ ಮತ್ತು ಹಿಮಾಚಲ ಪ್ರದೇಶ ರಾಜ್ಯಗಳಲ್ಲಿ ಮದುವೆಗಳನ್ನು ನೋಂದಣಿ ಮಾಡಿಸುವುದನ್ನು ಕಡ್ಡಾಯ ಮಾಡಲಾಗಿದೆ.
- ಬಾಲ್ಯವಿವಾಹವನ್ನು ೨೦೧೦ರ ಒಳಗಾಗಿ ಸಂಪೂರ್ಣವಾಗಿ ನಿಲ್ಲಿಸಲು ಮಕ್ಕಳ ರಾಷ್ಟ್ರೀಯ ಯೋಜನೆ - ೨೦೦೫ ರಲ್ಲಿ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಭಾರತ ಸರ್ಕಾರ ಪ್ರಕಟಣೆ) ಗುರಿಯನ್ನಾಗಿಸಿದೆ.